# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ –153 ಜಯನಗರ ವಾರ್ಡ್ ಸಭೆಯ ನಡವಳಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಜಯನಗರ ವಾರ್ಡ್–153 ರಲ್ಲಿ ವಾರ್ಡ್ ಸಭೆಯನ್ನು ಮಾನ್ಯ ಶ್ರೀಮತಿ. ವರಲಕ್ಷಮ್ಮ ಎಲ್. ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರ ಅಪ್ಪಣೆ ಮೇರೆಗೆ ದಿನಾಂಕ:07/03/2022 ಸೋಮವಾರದಂದು ಮಧ್ಯಾಹ್ನ 3.00 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸದಸ್ಯರಿಗೆ ಆಹ್ವಾನ ನೀಡಿದ್ದು, ಸಭೆಗೆ ಹಾಜರಾಗಿರುವ ಎಲ್ಲರಿಗೂ ಸ್ವಾಗತ ಕೋರುತ್ತಾ, ಸಭೆಯನ್ನು ನಡೆಸಲಾಯಿತು.

**ಹಾಜರಿದ್ದವರು:–**

1. ಶ್ರೀಮತಿ. ವರಲಕ್ಷಮ್ಮ ಎಲ್. ನೋಡಲ್ ಅಧಿಕಾರಿ ರವರು.
2. ಶ್ರೀ. ನವೀನ್‌ಕುಮಾರ್ ಕೆ. ಕಿರಿಯ ಅಭಿಯಂತರರು.
3. ಶ್ರೀಮತಿ. ರಮಾದೇವಿ ಸಹಾಯಕ ಅಭಿಯಂತರರು BESCOM.
4. ಶ್ರೀ. ಜಿ. ಮೂರ್ತಿ, ಸಹಾಯಕ ಅಭಿಯಂತರರು, ವಿದ್ಯುತ್ (ದಕ್ಷಿಣ)
5. ಶ್ರೀ. ಬೊಮ್ಮೇಗೌಡ, ಕೆಲಸ ಪರಿವೀಕ್ಷಕರು – 153
6. ಶ್ರೀ. ರವೀಂದ್ರ ಹಿಜೇರಿ, ಹಿರಿಯ ಆರೋಗ್ಯ ಪರಿವೀಕ್ಷಕರು.
7. ಕುಮಾರಿ. ಮಂಜುಶ್ರೀ ಎಲ್. ನಾಯಕ್, ಕಿರಿಯ ಅಭಿಯಂತರರು BWSSB.
8. ಶ್ರೀ. ವಿಜಯಕುಮಾರ್ ಕೆ.ಆರ್ ಕಿರಿಯ ಆರೋಗ್ಯ ಪರಿವೀಕ್ಷಕರು.
9. ಶ್ರೀಮತಿ. ಭೂದೇವಿ, ತೋಟಗಾರಿಕೆ ಪರಿವೀಕ್ಷಕರು.
10. ಶ್ರೀ. ಮಣಿಕಂಠಸ್ವಾಮಿ ಆರ್. ಮಾರ್ಷಲ್ – 153.
11. ಶ್ರೀ ಅನೀಸ್ ಅಹಮದ್, ಶ್ರೀ. ಬಹದ್ದೂರ್, ಶ್ರೀ. ಫಜಲ್ ಖಾನ್, ಶ್ರೀ. ಸಮೀಹುಲ್ಲಾ, ಶ್ರೀ. ಅಬ್ದುಲ್ ಹಫೀಜ್, ಶ್ರೀ. ಕಾಶಿಪ್ ಪಾಷ, ಶ್ರೀ. ಡಿ. ಹನುಮಂತೇಗೌಡ, ಶ್ರೀ. ಮೊಹಮ್ಮದ್ ಜಾಫರ್, ಶ್ರೀ. ಭೀಮಪ್ಪ & ಶ್ರೀ. ಸುರೇಶ್‌ಕುಮಾರ್ (ಸಾರ್ವಜನಿಕರು).

**ಸಭೆಗೆ ಗೈರು ಹಾಜರಾದ ಇಲಾಖೆಗಳು:–**

1. BWSSB ಜಯನಗರ ಇಲಾಖೆ, ಅಧಿಕಾರಿಗಳು ವಾರ್ಡ್ 153.
2. ಪೊಲೀಸ್ ಇನ್ಸ್‌ಪೆಕ್ಟರ್, ಸಿದ್ದಾಪುರ, ಬಸವನಗುಡಿ, ತಿಲಕ್‌ನಗರ, ಜಯನಗರ & ಮೈಕೋಲೇಔಟ್ ಅಧಿಕಾರಿಗಳು.
3. ಅರಣ್ಯ ಇಲಾಖೆಯ ಅಧಿಕಾರಿಗಳು.

*********



Scanned with CamScanner

1. ವಾರ್ಡ್-153 ರ ಕುಂದು ಕೊರತೆಗಳ ಬಗ್ಗೆ ಚರ್ಚಿಸುವ ಸಂಬಂಧ ದಿನಾಂಕ:07/03/2022 ಸೋಮವಾರದಂದು ಮಧ್ಯಾಹ್ನ 3.00 ಗಂಟೆಗೆ ನಿಗಧಿತ ಸಮಯಕ್ಕೆ ಸಭೆಯನ್ನು ಪ್ರಾರಂಭಿಸಲಾಯಿತು.

2. ವಾರ್ಡಿನ ಸ್ಥಳಿಯರಾದ ಶ್ರೀ. ಸಮೀಹುಲ್ಲಾ ರವರು ಮಾತನಾಡಿ ರೋಷನ್ ಕಾಲೋನಿಯಲ್ಲಿ ಒಳಚರಂಡಿ ಪೈಪ್ ಬ್ಲಾಕ್ ಆಗಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಆದ್ದರಿಂದ ಕೂಡಲೇ ಒಳಚರಂಡಿ ಪೈಪ್ ಬ್ಲಾಕ್ ಆಗಿರುವುದನ್ನು ಸರಿಪಡಿಸಿಕೊಡಲು ಕೋರಿದರು. ಇದಕ್ಕೆ ನೋಡಲ್ ಅಧಿಕಾರಿಯವರು ಮಾತನಾಡಿ ಸಂಬಂಧಪಟ್ಟ ಒಳಚರಂಡಿ ಮಂಡಳಿಯ ಅಭಿಯಂತರರಾದ ಶ್ರೀ. ಸುನಿಲ್ ಕುಮಾರ್ ರವರು ಸಭೆಯಲ್ಲಿ ಹಾಜರಿಲ್ಲದ ಕಾರಣ ಸದರಿಯವರಿಗೆ ಸಭೆಗೆ ಹಾಜರಾಗಲು ತಿಳಿಸಿ ಹಾಗೂ ಮೇಲ್ಕಂಡ ಸಮಸ್ಯೆಯನ್ನು ಬಗೆಹರಿಸುವಂತೆ ಪತ್ರ ಬರೆಯಲು ವಾರ್ಡ್ ಅಭಿಯಂತರರಿಗೆ ತಿಳಿಸಿದರು.

**ಕ್ರಮ : ವಾರ್ಡ್ ಅಭಿಯಂತರರು**
**ಒಳಚರಂಡಿ ಮಂಡಳಿ ಅಭಿಯಂತರರು**

3. ವಾರ್ಡಿನ ಸ್ಥಳಿಯರಾದ ಶ್ರೀ. ಸಮೀಹುಲ್ಲಾ ರವರು ಮಾತನಾಡಿ ರೋಷನ್ ಕಾಲೋನಿಯಲ್ಲಿ ಸ್ಟ್ರೀಟ್ ಲೈಟ್‌ಗಳು ಸರಿಯಾಗಿ ಕಾರ್ಯನಿರ್ವಹಿಸದೇ ಇರುವ ಬಗ್ಗೆ ತಿಳಿಸಿದರು. ಇದಕ್ಕೆ ನೋಡಲ್ ಅಧಿಕಾರಿಯವರು ಮಾತನಾಡಿ ಸಭೆಯಲ್ಲಿ ಹಾಜರಿದ್ದ ಶ್ರೀ. ಮೂರ್ತಿ ಸಹಾಯಕ ಅಭಿಯಂತರರು (ವಿದ್ಯುತ್) ರವರಿಗೆ ಕೂಡಲೆ ಈ ಬಗ್ಗೆ ಕ್ರಮ ವಹಿಸಲು ಸೂಚಿಸಿದರು.

**ಕ್ರಮ : ವಿದ್ಯುತ್ (ದಕ್ಷಿಣ) ವಿಭಾಗದ ಸಹಾಯಕ ಅಭಿಯಂತರರು**

4. ವಾರ್ಡಿನ ಸ್ಥಳಿಯರಾದ ಶ್ರೀ. ಅನಿಸ್ ಅಹಮದ್ ರವರು ಮಾತನಾಡಿ ಈ ಹಿಂದಿನ ಸಭೆಯಲ್ಲಿ ತಿಳಿಸಿದ್ದ ಒಳಚರಂಡಿ ಮ್ಯಾನ್‌ಹೋಲ್ ಎತ್ತರವನ್ನು ಸರಿಪಡಿಸುವ ಕೆಲಸವನ್ನು ಈ ತಹಲ್‌ವರೆವಿಗೂ ಒಳಚರಂಡಿ ಮಂಡಳಿಯ ಅಭಿಯಂತರರು ಮಾಡಿರುವುದಿಲ್ಲ ಎಂದು ಸಭೆಯಲ್ಲಿ ತಿಳಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸದರಿ ಒಳಚರಂಡಿ ಮಂಡಳಿಯ ಅಭಿಯಂತರರು ರವರಿಗೆ ಜಾರಿ ಮಾಡುತ್ತಿರುವ ನೋಟಿಸ್‌ನಲ್ಲಿ ಈ ವಿಷಯದ ಬಗ್ಗೆಯೂ ಸಹ ಪ್ರಸ್ತಾಪಿಸುವಂತೆ ವಾರ್ಡ್ ಅಭಿಯಂತರರಿಗೆ ತಿಳಿಸಿದರು.

**ಕ್ರಮ : ವಾರ್ಡ್ ಅಭಿಯಂತರರು**
**ಒಳಚರಂಡಿ ಮಂಡಳಿ ಅಭಿಯಂತರರು**



Scanned with CamScanner

5. ವಾರ್ಡ್ 153ರ ಸ್ಥಳೀಯರಾದ ಶ್ರೀ. ಭೀಮಪ್ಪ ರವರು ಮಾತನಾಡಿ ಗುಲ್ಬರ್ಗ ಕಾಲೋನಿಯ ಒಳಗೆ ವಿದ್ಯುತ್ ಕಂಬಗಳಿಗೆ ಹಾಗೂ ತಂತಿಗಳಿಗೆ ಅಡ್ಡಲಾಗಿರುವ ಮರದ ರೆಂಬೆಗಳನ್ನು ಕತ್ತಿರಿಸುವಂತೆ ಕೋರಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸಂಬಂಧಪಟ್ಟ ಅರಣ್ಯ ಇಲಾಖೆಯ ಅಧಿಕಾರಿಗಳು ಸ್ಥಳ ಪರಿಶೀಲಿಸಿ ಸದರಿ ರೆಂಬೆ ಕೊಂಬೆಗಳನ್ನು ಕತ್ತಿರಿಸುವ ಬಗ್ಗೆ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

**ಕ್ರಮ: ಅರಣ್ಯಾಧಿಕಾರಿಗಳು (ದಕ್ಷಿಣ)**

6. ವಾರ್ಡ್ 153ರ ಸ್ಥಳೀಯರಾದ ಶ್ರೀ. ಫಜಲ್ ಖಾನ್ ರವರು ಮಾತನಾಡಿ ಬಿ.ಹೆಚ್.ಇ.ಎಲ್ ಲೇಔಟ್‌ನಲ್ಲಿ ಅನಧಿಕೃತವಾಗಿ ನಿಲ್ಲಿಸುತ್ತಿರುವ ವಾಹನಗಳ ಬಗ್ಗೆ ಸಂಬಂಧಪಟ್ಟ ಟ್ರಾಫಿಕ್ ಪೊಲೀಸ್ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲವೆಂದು ತಿಳಿಸಿದರು ಮತ್ತು ಅನಧಿಕೃತವಾಗಿ ನಿರ್ಮಿಸಿರುವ ಶೆಡ್‌ಗಳನ್ನು ಸಹ ಈ ತಹಲ್‌ವರೆವಿಗೂ ತೆರವುಗೊಳಿಸಿರುವುದಿಲ್ಲವೆಂದು ಸಹ ಸಭೆಗೆ ತಿಳಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸಂಬಂಧಪಟ್ಟ ಟ್ರಾಫಿಕ್ ಪೊಲೀಸ್ ಅಧಿಕಾರಿಗಳು ಅನಧಿಕೃತವಾಗಿ ನಿಲ್ಲಿಸುತ್ತಿರುವ ವಾಹನಗಳ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಹಾಗೂ ಅನಧಿಕೃತ ಶೆಡ್‌ಗಳ ತೆರವುಗೊಳಿಸುವ ಬಗ್ಗೆ ಸಂಬಂಧಪಟ್ಟವರಿಗೆ ನೋಟಿಸ್ ಜಾರಿಮಾಡಿ ತೆರವುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ವಾರ್ಡ್ ಅಭಿಯಂತರರಿಗೆ ಮತ್ತು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಿದರು.

ಸದರಿ ಶೆಡ್‌ಗಳ ವಿಷಯದ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ. ಕಾಶಿಫ್ ಪಾಷ ರವರ ಮಾತನಾಡಿ ಸದರಿ ಶೆಡ್‌ಗಳನ್ನು ಈಗಾಗಲೇ ತೆರವುಗೊಳಿಸಲಾಗುತ್ತಿದ್ದು, ಅವುಗಳಲ್ಲಿ ಮೂರು ಶೆಡ್‌ಗಳು ತೆರವುಗೊಂಡಿರುತ್ತದೆ. ಈ ಬಗ್ಗೆ ತಾವುಗಳು ಬಂದು ಸ್ಥಳ ಪರಿಶೀಲಿಸಬಹುದಾಗಿರುತ್ತದೆ ಎಂದು ಹಾಗೂ ಉಳಿದ ಎಲ್ಲಾ ಶೆಡ್‌ಗಳನ್ನು ಇನ್ನು ಒಂದು ತಿಂಗಳುಗಳ ಒಳಗಾಗಿ ತೆರವುಗೊಳಿಸಲಾಗುವುದೆಂದು ಸಹ ಸಭೆಗೆ ತಿಳಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಬಿ.ಹೆಚ್.ಇ.ಎಲ್ ಆಫೀಸರ್ಸ್ ಲೇಔಟ್‌ನ ಸಾರ್ವಜನಿಕರ ಜೊತೆಗೂಡಿ ತೆರವುಗೊಂಡಿರುವ ಶೆಡ್‌ಗಳ ಬಗ್ಗೆ ಸ್ಥಳ ಪರಿಶೀಲಿಸಿ ಛಾಯಾಚಿತ್ರ ಪಡೆಯಲು ವಾರ್ಡ್ ಅಭಿಯಂತರರಿಗೆ

**ಕ್ರಮ ವಾರ್ಡ್ ಅಭಿಯಂತರರು, ಹಿರಿಯ ಆರೋಗ್ಯ ಪರಿವೀಕ್ಷಕರು**
**ಹಾಗೂ ಸಂಚಾರಿ ಪೊಲೀಸ್ ಠಾಣೆ ಮೈಕೋ ಲೇಔಟ್**



Scanned with CamScanner

7. ವಾರ್ಡ್ 153ರ ಸ್ಥಳೀಯರಾದ ಶ್ರೀ. ಫಜಲ್‌ಖಾನ್ ರವರು ಮಾತನಾಡಿ ಬಿ.ಹೆಚ್.ಇ.ಎಲ್ ಆಫೀಸರ್ಸ್ ಲೇಔಟ್‌ನಲ್ಲಿ ಅಳವಡಿಸಿರುವ ನಾಮಫಲಕದಲ್ಲಿ ಕೆಲವೊಂದು ಬದಲಾವಣೆಯನ್ನು ಮಾಡಲು ಮತ್ತು ಪಾರ್ಕ್‌ನಲ್ಲಿ ಸ್ಟ್ರೀಟ್‌ಲೈಟ್ ಮತ್ತು ಕ್ಯಾಮರಾ ಕಾರ್ಯನಿರ್ವಹಿಸದ ಬಗ್ಗೆ ತಿಳಿಸಿ ಸರಿಪಡಿಸುವಂತೆ ಕೋರಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸ್ಟ್ರೀಟ್‌ಲೈಟ್ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ. ಮೂರ್ತಿರವರನ್ನು ಕುರಿತು ತಮಗೆ ಈಗಾಗಲೇ ಹಲವಾರು ಬಾರಿ ಸ್ಟ್ರೀಟ್‌ಲೈಟ್‌ಗೆ ಸಂಬಂಧಿಸಿದಂತೆ ದೂರುಗಳ ಬಗ್ಗೆ ಕ್ರಮ ವಹಿಸುವಂತೆ ತಿಳಿಸಿದರೂ ಸಹ ಯಾವುದೇ ಕ್ರಮ ಕೈಗೊಳ್ಳದಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ಸದರಿಯವರಿಗೆ ತಿಳುವಳಿಕೆ ಪತ್ರ ಜಾರಿ ಮಾಡಲು ವಾರ್ಡ್ ಅಭಿಯಂತರರಿಗೆ ತಿಳಿಸಿದರು.

**ಕ್ರಮ : ವಿದ್ಯುತ್ (ದಕ್ಷಿಣ) ವಿಭಾಗದ ಸಹಾಯಕ ಅಭಿಯಂತರರು**
**& ವಾರ್ಡ್ ಅಭಿಯಂತರರು**

8. ವಾರ್ಡ್ 153ರ ಸ್ಥಳೀಯರಾದ ಶ್ರೀ. ಡಿ. ಹನುಮಂತೇಗೌಡ ರವರು ಮಾತನಾಡಿ ಜಂಟಿ ಆಯುಕ್ತರು (ದಕ್ಷಿಣ) ರವರ ಕಛೇರಿಯ ಕಟ್ಟಡ ಸೆಲ್ಲರ್ ಅನ್ನು ವಾಹನ ನಿಲುಗಡೆಗಾಗಿ ಮಾತ್ರ ಸೀಮಿತವಾಗಿದ್ದಂತಹ ಜಾಗವನ್ನು ಹಾಲಿ ವಾಹನಗಳನ್ನು ನಿಲ್ಲಿಸದೇ ಕಛೇರಿ ಕೆಲಸಗಳಿಗೆ ಬಳಸುತ್ತಿರುವುದರ ಬಗ್ಗೆ ಪ್ರಸ್ತಾಪಿಸಿ ಇದು ನಿಯಮಬಾಹಿರವಾಗಿದ್ದು, ಈ ಬಗ್ಗೆ ಪರಿಶೀಲಿಸಿ ಪ್ರಸ್ತಾಪಿತ ಸೆಲ್ಲರ್ ಅನ್ನು ವಾಹನ ನಿಲುಗಡೆಗೆ ಮಾತ್ರವೇ ಉಪಯೋಗಿಸಬೇಕೆಂದು ಸಭೆಗೆ ತಿಳಿಸಿದರು. ಈ ಬಗ್ಗೆ ನೋಡಲ್ ಅಧಕಾರಿಯವರು ಮಾತನಾಡಿ ಪ್ರಸ್ತಾಪಿತ ವಿಷಯವನ್ನು ಮಾನ್ಯ ಜಂಟಿ ಆಯುಕ್ತರು (ದಕ್ಷಿಣ) ರವರ ಗಮನಕ್ಕೆ ತರಲಾಗುವುದೆಂದು ಶ್ರೀ. ಡಿ. ಹನುಮಂತೇಗೌಡ ರವರಿಗೆ ಸಭೆಯಲ್ಲಿ ತಿಳಿಸಿದರು.

**ಕ್ರಮ : ನೋಡಲ್ ಅಧಿಕಾರಿಗಳು/ವಾರ್ಡ್ ಅಭಿಯಂತರರು**

9. ವಾರ್ಡ್ 153ರ ಸ್ಥಳೀಯರಾದ ಶ್ರೀ. ಡಿ. ಹನುಮಂತೇಗೌಡ ರವರು ಮಾತನಾಡಿ 4ನೇ ಅಡ್ಡರಸ್ತೆ 2ನೇ ಬ್ಲಾಕ್ ಜಯನಗರದಲ್ಲಿ ನಡೆಯುತ್ತಿರುವ ಪಾದಚಾರಿ ಕಾಮಗಾರಿಯ ಬಗ್ಗೆ ಮಾತನಾಡಿ ಚೆನ್ನಾಗಿದ್ದ ಪಾದಚಾರಿ ಮಾರ್ಗವನ್ನು ತೆಗೆದು ಹೊಸದಾಗಿ ಪಾದಚಾರಿ ಮಾರ್ಗ ಮಾಡುತ್ತಿರುವುದು ಪಾಲಿಕೆಗೆ ಆರ್ಥಿಕ ನಷ್ಟವುಂಟಾಗುತ್ತದೆ.



Scanned with CamScanner

ಅವಶ್ಯಕತೆ ಇರುವ ಕಡೆ ಮಾತ್ರ ಕಾಮಗಾರಿ ಕೈಗೊಂಡಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂದು ಸಭೆಗೆ ತಿಳಿಸಿದರು. ಈ ಬಗ್ಗೆ ವಾರ್ಡ್ ಅಭಿಯಂತರರು ಮಾತನಾಡಿ ಪ್ರಸ್ತಾಪಿತ ಕಾಮಗಾರಿಯು ಪಾಲಿಕೆಯ ರಸ್ತೆ ಮೂಲಭೂತ ಸೌಕರ್ಯ ರವರಿಂದ ನಿರ್ವಹಿಸುತ್ತಿರುವ ಕಾಮಗಾರಿಯಾಗಿರುತ್ತದೆ. ಈ ಬಗ್ಗೆ ಸಂಬಂಧಪಟ್ಟವರಿಗೆ ತಿಳಿಸಲಾಗುವುದೆಂದು ಸಭೆಗೆ ತಿಳಿಸಿದರು

**ಕ್ರಮ : ವಾರ್ಡ್ ಅಭಿಯಂತರರು/ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗ**

10. ಬಿಹೆಚ್ಇಎಲ್ ಲೇಔಟ್ ಸುತ್ತಮುತ್ತ ನಾಯಿಗಳ ಹಾವಳಿ ಹೆಚ್ಚಾಗಿದ್ದು, ಇವುಗಳನ್ನು ಸರಿಪಡಿಸುವಂತೆ ಸಭೆಯಲ್ಲಿ ಹಾಜರಿದ್ದ ಬಿ.ಹೆಚ್.ಇ.ಎಲ್ ಲೇಔಟ್ ಸಾರ್ವಜನಿಕರು ತಿಳಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸಂಬಂಧಪಟ್ಟವರಿಗೆ ಕ್ರಮ ವಹಿಸುವಂತೆ ಕೋರಲು ವಾರ್ಡ್ ಅಭಿಯಂತರರಿಗೆ ತಿಳಿಸಿದರು.

ಮೇಲಿನ ಎಲ್ಲಾ ಅಂಶಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲು ಹಾಜರಿದ್ದ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ತಿಳಿಸಿ ಮುಂದಿನ ಸಭೆಗೆ ಕಡ್ಡಾಯವಾಗಿ ಗೈರುಹಾಜರಾಗಿರುವ ಇತರೆ ಇಲಾಖೆಯವರು ಪಾಲ್ಗೊಂಡು ಮಾನ್ಯ ಆಯುಕ್ತರು (ಬಿಬಿಎಂಪಿ) ರವರು ವಹಿಸಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲರೂ ಸಹಕರಿಸಬೇಕೆಂದು ತಿಳಿಸುತ್ತಾ ಸಭೆ ಮುಕ್ತಾಯಗೊಳಿಸಲಾಯಿತು.

(ನವೀನ್‌ಕುಮಾರ್ ಕೆ.)
ಕಾರ್ಯದರ್ಶಿ
ವಾರ್ಡ್–153 ಜಯನಗರ

(ವರಲಕ್ಷ್ಮಮ್ಮ ಎಲ್)
ನೋಡಲ್ ಅಧಿಕಾರಿ
ವಾರ್ಡ್–153 ಜಯನಗರ



Scanned with CamScanner

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯದರ್ಶಿ ವಾರ್ಡ್ ಸಮಿತಿ/ಸಹಾಯಕ ಇಂಜಿನಿಯರ್‌ರವರ ಕಛೇರಿ, ಜಯನಗರ ವಾರ್ಡ್-153, 9ನೇ ಅಡ್ಡರಸ್ತೆ, 2ನೇ ಬ್ಲಾಕ್ ಜಯನಗರ, ಬೆಂಗಳೂರು-560011

## ತಿಳುವಳಿಕೆ ಪತ್ರ

ರವರಿಗೆ,

ದಿನಾಂಕ: 21-03-2022

ಶ್ರೀ. ಜಿ. ಮೂರ್ತಿ, ಸಹಾಯಕ ಅಭಿಯಂತರರು
ವಿದ್ಯುತ್ (ದಕ್ಷಿಣ), ಬಿಬಿಎಂಪಿ
ವಾಣಿಜ್ಯ ಸಂಕೀರ್ಣ ಕಟ್ಟಡ,
9ನೇ ಮುಖ್ಯರಸ್ತೆ, ಜಯನಗರ 2ನೇ ಬ್ಲಾಕ್
ಬೆಂಗಳೂರು-560011

ಮಾನ್ಯರೆ,

**ವಿಷಯ:** ವಾರ್ಡ್-153ರ ವ್ಯಾಪ್ತಿಯ ಸ್ಟ್ರೀಟ್ ಲೈಟ್‌ಗಳ ಸಂಬಂಧ ದಾಖಲಾಗಿರುವ ದೂರಿಗೆ ಸಂಬಂಧಪಟ್ಟಂತೆ ಕ್ರಮ ವಹಿಸುವ ಬಗ್ಗೆ.

* * * * *

ಮೇಲ್ಕಂಡ ವಿಷಯ ಸಂಬಂಧಿಸಿದಂತೆ ವಾರ್ಡ್ ಸಂಖ್ಯೆ 153 ಜಯನಗರ ವ್ಯಾಪ್ತಿಯ ಸಾರ್ವಜನಿಕರ ಕುಂದು ಕೊರತೆಗಳನ್ನ ನಿವಾರಿಸುವ ಹಿನ್ನೆಲೆಯಲ್ಲಿ ಈ ಹಿಂದೆ ನಡೆದ ಹಲವು ವಾರ್ಡ್ ಕಮಿಟಿ ಸಭೆಗಳಲ್ಲಿ ಬಿ.ಹೆಚ್.ಇ.ಎಲ್ ಲೇಔಟ್ ಉದ್ಯಾನವನ, ರೋಷನ್ ಕಾಲೋನಿ ಸುತ್ತಮುತ್ತಲಲ್ಲಿ ಸ್ಟ್ರೀಟ್‌ಲೈಟ್‌ಗಳ ಹಾಳಾಗಿದ್ದು, ಸರಿಪಡಿಸುವಂತೆ ತಿಳಿಸಿದ್ದರೂ ಸಹ ತಾವುಗಳು ಈ ತಹಲ್‌ವರೆವಿಗೂ ಯಾವುದೇ ಕ್ರಮ ವಹಿಸಿರುವುದಿಲ್ಲ. ಹಾಗೂ ದಿನಾಂಕ:07-03-2022 ರಂದು ನಡೆದ ಸಭೆಯಲ್ಲಿ ಪ್ರಸ್ತಾಪಿತ ವಿಷಯದ ಬಗ್ಗೆ ಸಾರ್ವಜನಿಕರು ಮತ್ತೊಮ್ಮೆ ದೂರು ನೀಡಿರುತ್ತಾರೆ. ಆದ್ದರಿಂದ ಈ ವಿಷಯದ ಬಗ್ಗೆ ಕೂಲಡೇ ಕ್ರಮ ಕೈಗೊಂಡು ಮುಂದಿನ ಸಭೆಯಲ್ಲಿ ಕೈಗೊಂಡ ಕ್ರಮದ ಬಗ್ಗೆ ವರದಿಯೊಂದಿಗೆ ಮುಂದಿನ ವಾರ್ಡ್ ಸಮಿತಿ ಸಭೆಗೆ ಕಡ್ಡಾಯವಾಗಿ ಹಾಜರಾಗಲು ಈ ಮೂಲಕ ಸೂಚಿಸಿದೆ. ತಪ್ಪಿದ್ದಲ್ಲಿ ಈ ಬಗ್ಗೆ ಮಾನ್ಯ ಆಯುಕ್ತರು ರವರಿಗೆ ವರದಿ ಸಲ್ಲಿಸಲಾಗುವುದು.

**ನೋಡೆಲ್ ಆಫೀಸರ್**
**ವಾರ್ಡ್-153 -ಜಯನಗರ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಪ್ರತಿಯನ್ನು:**

1. ಮಾನ್ಯ ವಲಯ ಆಯುಕ್ತರು (ದಕ್ಷಿಣ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ (ದಕ್ಷಿಣ), ಬಿಬಿಎಂಪಿ, ವಾಣಿಜ್ಯ ಸಂಕೀರ್ಣ ಕಟ್ಟಡ, 9ನೇ ಮುಖ್ಯರಸ್ತೆ, ಜಯನಗರ 2ನೇ ಬ್ಲಾಕ್ ಬೆಂಗಳೂರು-560011 ರವರಿಗೆ ಮುಂದಿನ ಕ್ರಮಕ್ಕಾಗಿ.
3. ಕಛೇರಿ ಕಡತಕ್ಕೆ.

Scanned with CamScanner

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಕಾರ್ಯದರ್ಶಿ ವಾರ್ಡ್ ಸಮಿತಿ/ಸಹಾಯಕ ಇಂಜಿನಿಯರ್‌ರವರ ಕಛೇರಿ, ಜಯನಗರ ವಾರ್ಡ್-153, 9ನೇ ಅಡ್ಡರಸ್ತೆ, 2ನೇ ಬ್ಲಾಕ್ ಜಯನಗರ, ಬೆಂಗಳೂರು-560011**

## ತಿಳುವಳಿಕೆ ಪತ್ರ

ರವರಿಗೆ, ದಿನಾಂಕ: 21-03-2022

ಶ್ರೀ. ಸುನಿಲ್ ಕುಮಾರ್,
ಸಹಾಯಕ ಅಭಿಯಂತರರು
SW-4 ಉಪವಿಭಾಗ, BWSSB ಕಪಿಲ ಭವನ
35 & 36ನೇ ಅಡ್ಡರಸ್ತೆ, 11ನೇ ಮುಖ್ಯರಸ್ತೆ,
ಜಯನಗರ 4ನೇ ಟಿ ಬ್ಲಾಕ್, ಬೆಂಗಳೂರು-560041

**ಮಾನ್ಯರೆ,**

**ವಿಷಯ:** ವಾರ್ಡ್-153ರ ವಾರ್ಡ್ ಕಮಿಟಿ ಸಭೆಗೆ ಹಾಜರಾಗದೇ ಇರುವ ಬಗ್ಗೆ.

* * * * *

ಮೇಲ್ಕಂಡ ವಿಷಯ ಸಂಬಂಧಿಸಿದಂತೆ ವಾರ್ಡ್ ಸಂಖ್ಯೆ 153 ಜಯನಗರ ವ್ಯಾಪ್ತಿಯ ಸಾರ್ವಜನಿಕರ ಕುಂದು ಕೊರತೆಗಳನ್ನ ನಿವಾರಿಸುವ ಹಿನ್ನೆಲೆಯಲ್ಲಿ ಈ ಹಿಂದೆ ನಡೆದ ಹಲವು ವಾರ್ಡ್ ಕಮಿಟಿ ಸಭೆಗಳಲ್ಲಿ ಆದ್ದರಿಂದ ಕೂಡಲೇ ಸದರಿ ವಿದ್ಯುತ್ ಕಂಬವನ್ನು ಸರಿಪಡಿಸುವಂತೆ ಅಲ್ಲಿನ ಸಾರ್ವಜನಿಕರು ಕೋರಿರುತ್ತಾರೆ. ಈ ಬಗ್ಗೆ ತಮಗೆ ದೂರವಾಣಿ ಮುಖಾಂತರ ಸರಿಪಡಿಸುವಂತೆ ತಿಳಿಸಿದ್ದರೂ ಸಹ ತಾವುಗಳು ಯಾವುದೇ ಕ್ರಮ ವಹಿಸಿರುವುದಿಲ್ಲ. ಹಾಗೂ ದಿನಾಂಕ:07-03-2022 ರಂದು ನಡೆದ ಸಭೆಯಲ್ಲಿ ಪ್ರಸ್ತಾಪಿತ ವಿಷಯದ ಬಗ್ಗೆ ಚರ್ಚಿಸಲಾಯಿತು. ಈ ಸಮಯದಲ್ಲಿ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಈ ತಹಲ್‌ವರೆವಿಗೂ ಯಾವುದೇ ಕ್ರಮ ವಹಿಸಿರುವುದಿಲ್ಲ ಎಂದು ದೂರನ್ನು ನೀಡಿರುತ್ತಾರೆ. ಆದ್ದರಿಂದ ಈ ವಿಷಯದ ಬಗ್ಗೆ ಕೂಲಡೇ ಕ್ರಮ ಕೈಗೊಂಡು ಮುಂದಿನ ಸಭೆಯಲ್ಲಿ ಕೈಗೊಂಡ ಕ್ರಮದ ಬಗ್ಗೆ ವರದಿಯೊಂದಿಗೆ ಮುಂದಿನ ವಾರ್ಡ್ ಸಮಿತಿ ಸಭೆಗೆ ಕಡ್ಡಾಯವಾಗಿ ಹಾಜರಾಗಲು ಈ ಮೂಲಕ ಸೂಚಿಸಿದೆ. ತಪ್ಪಿದ್ದಲ್ಲಿ ಈ ಬಗ್ಗೆ ಮಾನ್ಯ ಆಯುಕ್ತರು ರವರಿಗೆ ವರದಿ ಸಲ್ಲಿಸಲಾಗುವುದು.

(ಸಹಿ)
**ನೋಡೆಲ್ ಆಫೀಸರ್**
**ವಾರ್ಡ್-153 –ಜಯನಗರ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಪ್ರತಿಯನ್ನು:**

1. ಮಾನ್ಯ ವಲಯ ಆಯುಕ್ತರು (ದಕ್ಷಿಣ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಕಾರ್ಯಪಾಲಕ ಅಭಿಯಂತರರು, SW-4 ವಿಭಾಗ, BWSSB ಕಪಿಲ ಭವನ, 35 & 36ನೇ ಅಡ್ಡರಸ್ತೆ, 11ನೇ ಮುಖ್ಯರಸ್ತೆ, ಜಯನಗರ 4ನೇ ಟಿ ಬ್ಲಾಕ್, ಬೆಂಗಳೂರು-560041 ರವರ ಮುಂದಿನ ಕ್ರಮಕ್ಕಾಗಿ.
3. ಕಛೇರಿ ಕಡತಕ್ಕೆ.

Scanned with CamScanner

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಕಾರ್ಯದರ್ಶಿ ವಾರ್ಡ್ ಸಮಿತಿ/ಸಹಾಯಕ ಇಂಜಿನಿಯರ್‌ರವರ ಕಛೇರಿ, ಜಯನಗರ ವಾರ್ಡ್–153, 9ನೇ ಅಡ್ಡರಸ್ತೆ, 2ನೇ ಬ್ಲಾಕ್ ಜಯನಗರ, ಬೆಂಗಳೂರು–560011**

## ತಿಳುವಳಿಕೆ ಪತ್ರ

ರವರಿಗೆ, ದಿನಾಂಕ: 21-03-2022

ಶ್ರೀ. ಪ್ರಕಾಶ್, ಸಹಾಯಕ ಅಭಿಯಂತರರು
ಬೆಸ್ಕಾಂ ಎಸ್ – 1 ಉಪವಿಭಾಗ
# 209, 45ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ,
ಸಂಗಮ್ ಸರ್ಕಲ್, ಜಯನಗರ 8ನೇ ಬ್ಲಾಕ್
ಬೆಂಗಳೂರು–560070

ಮಾನ್ಯರೆ,

**ವಿಷಯ:** ವಾರ್ಡ್–153ರ ವಾರ್ಡ್ ಕಮಿಟಿ ಸಭೆಗೆ ಹಾಜರಾಗದೇ ಇರುವ ಬಗ್ಗೆ.

* * * * *

ಮೇಲ್ಕಂಡ ವಿಷಯ ಸಂಬಂಧಿಸಿದಂತೆ ವಾರ್ಡ್ ಸಂಖ್ಯೆ 153 ಜಯನಗರ ವ್ಯಾಪ್ತಿಯ ಸಾರ್ವಜನಿಕರ ಕುಂದು ಕೊರತೆಗಳನ್ನ ನಿವಾರಿಸುವ ಹಿನ್ನೆಲೆಯಲ್ಲಿ ಈ ಹಿಂದೆ ನಡೆದ ಹಲವು ವಾರ್ಡ್ ಕಮಿಟಿ ಸಭೆಗಳಲ್ಲಿ ಎಸ್.ಆರ್.ಕೆ ಗಾರ್ಡನ್‌ನ ಬಾಲ್ಡ್‌ವಿನ್ ಶಾಲೆ ಬಳಿ ಮ್ಯಾನ್ ಹೋಲ್‌ನ ರಿಂಗ್ ಹಾಳಾಗಿದ್ದು, ಬದಲಿಸುವಂತೆ ಕೋರಲಾಗಿತ್ತು. ಈ ಬಗ್ಗೆ ತಮಗೆ ದೂರವಾಣಿ ಮುಖಾಂತರ ಸರಿಪಡಿಸುವಂತೆ ತಿಳಿಸಿದ್ದರೂ ಸಹ ತಾವುಗಳು ಯಾವುದೇ ಕ್ರಮ ವಹಿಸಿರುವುದಿಲ್ಲ. ಹಾಗೂ ದಿನಾಂಕ:07–03–2022 ರಂದು ನಡೆದ ಸಭೆಯಲ್ಲಿ ಪ್ರಸ್ತಾಪಿತ ವಿಷಯದ ಬಗ್ಗೆ ಚರ್ಚಿಸಲಾಯಿತು. ಈ ಸಮಯದಲ್ಲಿ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಈ ತಹಲ್‌ವರೆವಿಗೂ ಯಾವುದೇ ಕ್ರಮ ವಹಿಸಿರುವುದಿಲ್ಲ ಎಂದು ದೂರನ್ನು ನೀಡಿರುತ್ತಾರೆ. ಆದ್ದರಿಂದ ಈ ವಿಷಯದ ಬಗ್ಗೆ ಕೂಲಡೇ ಕ್ರಮ ಕೈಗೊಂಡು ಮುಂದಿನ ಸಭೆಯಲ್ಲಿ ಕೈಗೊಂಡ ಕ್ರಮದ ಬಗ್ಗೆ ವರದಿಯೊಂದಿಗೆ ಮುಂದಿನ ವಾರ್ಡ್ ಸಮಿತಿ ಸಭೆಗೆ ಕಡ್ಡಾಯವಾಗಿ ಹಾಜರಾಗಲು ಈ ಮೂಲಕ ಸೂಚಿಸಿದೆ. ತಪ್ಪಿದ್ದಲ್ಲಿ ಈ ಬಗ್ಗೆ ಮಾನ್ಯ ಆಯುಕ್ತರು ರವರಿಗೆ ವರದಿ ಸಲ್ಲಿಸಲಾಗುವುದು.

**ನೋಡೆಲ್ ಆಫೀಸರ್**
**ವಾರ್ಡ್–153 –ಜಯನಗರ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಪ್ರತಿಯನ್ನು:**

1. ಮಾನ್ಯ ವಲಯ ಆಯುಕ್ತರು (ದಕ್ಷಿಣ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ಎಸ್ – 1 ವಿಭಾಗ # 209, 45ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, ಸಂಗಮ್ ಸರ್ಕಲ್, ಜಯನಗರ 8ನೇ ಬ್ಲಾಕ್, ಬೆಂಗಳೂರು–560070 ರವರಿಗೆ ಮುಂದಿನ ಕ್ರಮಕ್ಕಾಗಿ.
3. ಕಛೇರಿ ಕಡತಕ್ಕೆ.

Scanned with CamScanner